ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಗುರುವಾರ, ದಿನಾಂಕ : 10 ನೇ ಡಿಸೆಂಬರ್, 2020

ಬಿ. ಬಿ. ಎಂ. ಪಿ ದಾನಪತ್ರ ಮತ್ತು ವಿಭಾಗ ಪತ್ರಗಳ ಆಸ್ತಿ ವಿಭಜನೆ ಕಾನೂನು ಬಾಹಿರ ಕುರಿತು

ಶ್ರೀ ಹೆಚ್. ಎಂ. ರಮೇಶ ಗೌಡ(ವಿಧಾನ ಸಭೆಯಿಂದ ಚುನಾಯಿತರಾದವರು) –

344 (367) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬಿ. ಬಿ. ಎಂ. ಪಿ ದಾನಪತ್ರ ಕ್ರಯಪತ್ರ ಮತ್ತು ವಿಭಾಗ ಪತ್ರಗಳ ಅನ್ವಯ ಆಸ್ತಿ ವಿಭಜನೆ ಕಾನೂನು ಬಾಹಿರ ಎಂದು ದಿ: 20-10-2014ರಲ್ಲಿ ಸುತ್ತೋಲೆ ಹೊರಡಿಸಿರುವುದು ನಿಜವೇ; (ಈ ಸುತ್ತೋಲೆಯ ಕುರಿತು ಸರ್ಕಾರ ಸ್ಪಷ್ಟೀಕರಣ ನೀಡುತ್ತಿದೆಯೇ)

(ಆ) ಕೇವಲ ಆಸ್ತಿ ತೆರಿಗೆ, ಶುಲ್ಕ ಮಾತ್ರ ವಸೂಲಿ ಮಾಡುವ ಮಹಾನಗರ ಪಾಲಿಕೆ ಆಸ್ತಿ ವಿಭಜನೆಯ ಕುರಿತು ಯಾವ ಆದೇಶ, ನಿಯಮಾವಳಿ ಅಳವಡಿಕೆ ಅನ್ವಯ ಈ ಸುತ್ತೋಲೆ ಹೊರಡಿಸಲಾಗಿದೆ;

(ಇ) ಬಿ. ಬಿ. ಎಂ. ಪಿ ಸುತ್ತೋಲೆ ಪ್ರಕಾರ ಖಾತಾ ನೋಂದಾವಣೆ ವಿಭಜನೆಗಳು ಯಾವ ಆಸ್ತಿಗೆ ಅನ್ವಯಿಸುತ್ತವೆ; ಪಾಲಿಕೆಯ ಸುತ್ತೋಲೆಯಿಂದ ಪಿತ್ರರ್ಜಿತ ಆಸ್ತಿ ಹಂಚಿಕೆಯಲ್ಲಿ ಜನಸಾಮಾನ್ಯರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಎ ಖಾತಾ ಮತ್ತು ಬಿ ಖಾತಾ ನಡುವಿನ ವ್ಯತ್ಯಾಸಗಳೇನು ;ಬಿ ಖಾತಾ ಹೆಸರಿನಲ್ಲಿ ದಂದೆ ನಡೆಯುತ್ತಿರುವುದು ಮತ್ತು ಜನರನ್ನು ಬಿ. ಬಿ. ಎಂ. ಪಿ ಖಾತೆಯ ಹೆಸರಲ್ಲಿ ಶೋಷಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು?